ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027. ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್ : www.ksrtc.in

Karnataka State Road Transport Corporation
"Transport House" Central Offices,
K.H.Road, Shanthinagar, Bangalore-560 027. India
Tel : 080-22221321 / 25
Website : www.ksrtc.in

ಸಂ.ಕರಾಸ:ಕೇಕ:ಆಡಳಿತ:01: 1196 :2019-20 ದಿನಾಂಕ: 02-03-2020

## ಸುತ್ತೋಲೆ ಸಂಖ್ಯೆ : 1673

(ಆಡಳಿತ ಶಾಖೆಯಿಂದ ಹೊರಡಿಸಲಾಗಿದೆ)

**ವಿಷಯ:** ಕ.ರಾ.ರ.ಸಾ ನಿಗಮದ ಅಧಿಕಾರಿ ಮತ್ತು ಸಿಬ್ಬಂದಿಗಳ ವಿರುದ್ಧ ಸ್ವೀಕರಿಸುವ ಅನಾಮಧೇಯ ಅರ್ಜಿ/ಬೇನಾಮಿ ದೂರುಗಳ ಬಗ್ಗೆ ಕ್ರಮ ಕುರಿತು ಮುಂದುವರೆದ ನಿರ್ದೇಶನಗಳು.

**ಉಲ್ಲೇಖ:** 1. ಸುತ್ತೋಲೆ ಸಂಖ್ಯೆ: 1609, ದಿನಾಂಕ:10-01-2017
2. ಸುತ್ತೋಲೆ ಸಂಖ್ಯೆ: 1656, ದಿನಾಂಕ:31-10-2019

- - - -

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಅಧಿಕಾರಿ ಮತ್ತು ಸಿಬ್ಬಂದಿಗಳ ವಿರುದ್ಧ ಸ್ವೀಕರಿಸಲಾಗುವ ಯಾವುದೇ ಅನಾಮಧೇಯ ಅರ್ಜಿ/ಬೇನಾಮಿ ದೂರುಗಳ ಕುರಿತು ಪರಿಶೀಲಿಸಿ ಪೂರ್ಣ ವಿಳಾಸವಿರುವ ದೂರುಗಳನ್ನು ಆಂತರಿಕ ಇಲಾಖಾ ವಿಚಾರಣೆ ನಡೆಸಿದಾಗ, ದೂರು ನೀಡಿದ ದೂರುದಾರರು ಸುಳ್ಳು/ತಪ್ಪು ವಿಳಾಸಗಳನ್ನು ನೀಡುತ್ತಿರುವುದು ಕಂಡುಬಂದಿರುತ್ತದೆ. ಇದರಿಂದ ದೂರುದಾರರು ತಮ್ಮ ಹೇಳಿಕೆಯನ್ನು ಸಮರ್ಥಿಸಲು ಆಗದೇ, ದುರುದ್ದೇಶದಿಂದ ನಿಗಮದ ಗೌರವಕ್ಕೆ ಚ್ಯುತಿ ತರುವ ಸಾಧ್ಯತೆ ಇರುತ್ತದೆ.

ಆದ್ದರಿಂದ, ಇನ್ನು ಮುಂದೆ ಯಾವುದೇ ದೂರುಗಳನ್ನು ಸ್ವೀಕರಿಸುವಾಗ, ದೂರುದಾರರು ತಮ್ಮ ಸಂಪೂರ್ಣ ವಿಳಾಸವಿರುವ ಅಧಿಕೃತ ದಾಖಲೆಗಳಾದ ಆಧಾರ್ ಕಾರ್ಡ್ ಹಾಗೂ ಚಾಲ್ತಿಯಲ್ಲಿರುವ ದೂರವಾಣಿ/ಮೊಬೈಲ್ ಸಂಖ್ಯೆ ನೀಡಿದಲ್ಲಿ ಮಾತ್ರ ಅಂತಹ ದೂರುಗಳನ್ನು ತನಿಖೆಗೆ/ವಿಚಾರಣೆಗೆ ಪರಿಗಣಿಸುವಂತೆ ಹಾಗೂ ಈ ಎರಡೂ ಮಾಹಿತಿ/ದಾಖಲೆಗಳು ಲಭ್ಯವಿಲ್ಲದೇ ಇದ್ದಲ್ಲಿ, ಅಂತಹ ಅನಾಮಧೇಯ ದೂರುಗಳನ್ನು ಪರಿಗಣಿಸದೇ ಇರಲು ಹಾಗೂ ಯಾವುದೇ ರೀತಿಯ ತನಿಖೆ/ವಿಚಾರಣೆ ಮಾಡದೇ ಇರಲು ಆದೇಶಿಸಿದೆ.

(ಶಿವಯೋಗಿ ಸಿ. ಕಳಸದ, ಭಾ.ಆ.ಸೇ.,)
ವ್ಯವಸ್ಥಾಪಕ ನಿರ್ದೇಶಕರು

## ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ : ಕೇಂದ್ರ ಕಛೇರಿ : ಕಲಬುರಗಿ

ಸಂ:ಈಕರಸಾ/ಕೇಕ/ಸಿಬ್ಬಂದಿ/ಆಡಳಿತ/ಆ4/546 /2020 ದಿನಾಂಕ: 11 /03/2020.

**"ಕರಾರಸಾ ನಿಗಮದಿಂದ ಹೊರಡಿಸಲಾದ ಸುತ್ತೋಲೆ ಸಂಖ್ಯೆ 1673 ದಿನಾಂಕ:02/03/2020 ನ್ನು, ಈಕರಸಾ ಸಂಸ್ಥೆಯಲ್ಲಿ ಯಥಾವತ್ತಾಗಿ ಅಳವಡಿಸಿಕೊಳ್ಳಲು ಮಾನ್ಯ ವ್ಯವಸ್ಥಾಪಕ ನಿರ್ದೇಶಕ ರವರು ಆದೇಶಿಸಿರುತ್ತಾರೆ" ಸಂಬಂಧಪಟ್ಟವರು ಸದರಿ ಸುತ್ತೋಲೆಯಲ್ಲಿನ ನಿರ್ದೇಶನಗಳನ್ನು ಪಾಲಿಸಲು ಕೋರಲಾಗಿದೆ.**

11/3/2020

ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು

ಪ್ರತಿಯನ್ನು:-

✓ ಎಲ್ಲಾ ಇಲಾಖಾ ಮುಖ್ಯಸ್ಥರು /ವಿಭಾಗೀಯ ನಿಯಂತ್ರಣಾಧಿಕಾರಿಗಳು /ಕಾರ್ಯವ್ಯವಸ್ಥಾಪಕರು / ಕಾರ್ಯನಿರ್ವಾಹಕ ಅಭಿಯಂತರರು ಮತ್ತು ಪ್ರಾಂಶುಪಾಲರು, ಈಕರಸಾ ಸಂಸ್ಥೆ ರವರ ಮಾಹಿತಿಗಾಗಿ.

✓ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ರವರ ಆಪ್ತ ಕಾರ್ಯದರ್ಶಿ, ಈಕರಸಾ ಸಂಸ್ಥೆ, ಕೇಂದ್ರ ಕಛೇರಿ, ಕಲಬುರಗಿ ರವರ ಮಾಹಿತಿಗಾಗಿ.